**ಸಾಕ್ಷಿಗೆ ದಿನಾಂಕ 08.04.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ C.S.S.ವಕೀಲರಿಂದ**

ನನ್ನ ತಂದೆಯ ಹೆಸರು ಕರಿಯಪ್ಪ ಎಂದರೆ ಸರಿ. ತಾಯಿ ಚಿನ್ನಮ್ಮ ಎಂದರೆ ಸರಿ. ನಮ್ಮ ತಂದೆ ತಾಯಿಗೆ ನಾವು ಒಟ್ಟು ಎರಡು ಗಂಡು ಹಾಗೂ ಮೂರು ಹೆಣ್ಣು ಮಕ್ಕಳು ಎಂದರೆ ಸರಿ. ಅವರುಗಳೆಂದರೆ ವಾದಿ ಮತ್ತು 2, 5 ರಿಂದ 7 ನೇ ಪ್ರತಿವಾದಿಗಳು ಎಂದರೆ ಸರಿ. ದಿಃ16.10.2009 ರಂದು ನನ್ನ ತಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ದಿಃ29.03.2023 ರಂದು ನನ್ನ ತಾಯಿ ತೀರಿಕೊಂಡಿರುತ್ತಾರೆ ಎಂದರೆ ಸರಿ. 5 ರಿಂದ 7 ನೇ ಪ್ರತಿವಾದಿಗಳು ತನ್ನ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಹೆಣ್ಣುಮಕ್ಕಳ ಮದುವೆಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿಯಲ್ಲ ಹಿರಿಯ ಮಗಳ ಮದುವೆ ನಮ್ಮ ತಂದೆ ಮಾಡಿರುತ್ತಾರೆ ಉಳಿದ ಇಬ್ಬರ ತಂಗಿಯರ ಮದುವೆಯನ್ನು ನಾನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಇಬ್ಬರು ತಂಗಿಯರ ಮದುವೆಯನ್ನು ನಾನು ಯಾವಾಗ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಮದುವೆಯ ಆಮಂತ್ರಣ ಪತ್ರಿಕೆಗಳು ನಮ್ಮ ಮನೆಯಲ್ಲಿವೆ ನ್ಯಾಯಾಲಯಕ್ಕೆ ಹಾಜುರಪಡಿಸಲು ತೊಂದರೆ ಇಲ್ಲ. 5 ನೇ ಪ್ರತಿವಾದಿಗೆ 2014 ರಲ್ಲಿ 53 ವಯಸ್ಸಾಗಿತ್ತು ಎಂದರೆ ಸರಿ. ಪ್ರಸ್ತುತ 65 ವರ್ಷ ಎಂದರೆ ಸರಿ. 5 ನೇ ಪ್ರತಿವಾದಿಗೆ ಎಷ್ಟನೇ ವಯಸ್ಸಿಗೆ ಮದುವೆಯಾಗಿತ್ತು ಎಂದು ನನಗೆ ನೆನಪಿಲ್ಲ. 6 ನೇ ಪ್ರತಿವಾದಿ 22-23 ವಯಸ್ಸಿದ್ದಾಗ ಮದುವೆಯಾಗಿರುತ್ತದೆ. 7 ನೇ ಪ್ರತಿವಾದಿ 20-21 ವಯಸ್ಸಿದ್ದಾಗ ಮದುವೆಯಾಗಿರುತ್ತದೆ. 6 ಮತ್ತು 7 ನೇ ಪ್ರತಿವಾದಿಯರು ಮದುವೆಯಾಗುವ ಸಮಯದಲ್ಲಿ ನನ್ನ ತಂದೆ ಬದುಕಿದ್ದರು. 6 ಮತ್ತು 7 ನೇ ಪ್ರತಿವಾದಿಯರು ಮದುವೆಯನ್ನು ನಾನು ಮಾಡಿದ್ದು ನಾನು ಮದುವೆ ಮಾಡಿರುವುದನ್ನು ನಮ್ಮ ಊರಿನ ಗ್ರಾಮಸ್ಥರು ನೋಡಿರುತ್ತಾರೆ.

ನಾನು ವ್ಯವಸಾಯವನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ನನ್ನ ತಂದೆ ತೀರಿಕೊಳ್ಳುವವರೆಗೂ ಸಹ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಅವಿದ್ಯಾಂತರಾಗಿದ್ದರಿಂದ ನಾನು ಯಜಮಾನಿಕೆ ಮಾಡುತ್ತಿದ್ದೇನು ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲ ನಾನೇ ಮಾಡುತ್ತಿದ್ದೇನು ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ನಾನು ಮನೆತನದ ಯಜಮಾನಿಕೆ ಮಾಡುತ್ತಿದ್ದೇನು ಎಂದು ಹೇಳಿ ಬರೆಸಿರುತ್ತೇನೆ. ಪ್ರತಿವಾದ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನು ಮಾಹಿತಿ ನೀಡಿಲ್ಲ. ನಮ್ಮ ಪ್ರತಿವಾದ ಪತ್ರದಲ್ಲಿ ಸರ್ವೆ ನಂಬರ 46/2, 04 ಎಕರೆ 09 ಗುಂಟೆ ಹಾಗೂ ಮನೆ ಮತ್ತು ನಿವೇಶನದಲ್ಲಿ ಎಲ್ಲರಿಗೂ ಸಮನಾದ ಹಕ್ಕು ಇದೆ ಎಂದು ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸರ್ವೆ ನಂಬರ 46/1, 01 ಎಕರೆ 20 ಗುಂಟೆ ಹಾಗೂ 46/3, 01 ಎಕರೆ 21 ಗುಂಟೆ ಚಿನ್ನಮ್ಮರವರ ಸ್ವಯಾರ್ಜಿತ ಸ್ವತ್ತು ಎಂದು ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ. ನನ್ನ ತಾಯಿ ಬದುಕಿದ್ದಾಗ ಸದರಿ ಜಮೀನುಗಳನ್ನು ವಿಲೇವಾರಿ ಮಾಡಿಲ್ಲ. ಸದರಿ ಜಮೀನುಗಳು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತುಗಳಲ್ಲ ಒಂದು ವೇಳೆ ಸ್ವಯಾರ್ಜಿತ ಸ್ವತ್ತುಗಳು ಆದರೂ ಸಹ ನನ್ನ ತಾಯಿ ತೀರಿಕೊಂಡ ನಂತರ ವಾದಿ ಹಾಗೂ ಪ್ರತಿವಾದಿಯರಿಗೆ ಸದರಿ ಜಮೀನುಗಳಲ್ಲಿ ಸಮನಾದ ಹಕ್ಕು ಇದೆ ಎಂದರೆ ಸರಿ. ವಾದಿ ನನ್ನ ತಮ್ಮ ಎಂದರೆ ಸರಿ. ವಾದಿಗೆ ಮಾತನಾಡುವಾಗ ತೊದಲುತ್ತಾರೆ ಎಂದರೆ ಸರಿ. ಒಂದು ವೇಳೆ ಜೋರಾಗಿ ಮಾತನಾಡಿದರೆ ವಾದಿಗೆ ವಾಪಸ್ಸು ಮಾತನಾಡಲು ಬರುವುದಿಲ್ಲ ಎಂದರೆ ಸರಿ. ವಾದಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ವಾದಿಯ ಪರವಾಗಿ ಆತನ ಹೆಂಡತಿ ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಸರಿ.

8 ನೇ ಪ್ರತಿವಾದಿಗೆ ಸರ್ವೆ ನಂಬರ 46/3, 01 ಎಕರೆ 21 ಗುಂಟೆ ಜಮೀನನ್ನು 15 ಲಕ್ಷ ರೂಪಾಯಿಗೆ ನಿಡಿ-1 ರ ಪ್ರಕಾರ ಆಧಾರ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಡಿ-1 ರಲ್ಲಿ ಮಾಸಿಕ ಶೇ.2% ಬಡ್ಡಿಯಂತೆ ಆಧಾರ ಮಾಡಲಾಗಿದೆ ಎಂದರೆ ಸರಿ. ನಿಡಿ-2 ರ ನೋಟೀಸ್ 2 ಮತ್ತು 3 ನೇ ಪ್ರತಿವಾದಿಯರಿಗೆ ನೀಡಿದ

ನೋಟಿಸ್ ಎಂದರೆ ಸರಿ. ನಿಡಿ-2 ರ ಪ್ರಕಾರ 15 ಲಕ್ಷ ರೂಪಾಯಿಗೆ ಸದರಿ ಸ್ವತ್ತನ್ನು ಭೋಗ್ಯ ಮಾಡಿದ್ದು ಸದರಿ 15 ಲಕ್ಷದ ಮೊತ್ತಕ್ಕೆ ನಾನು ಮತ್ತು 3 ನೇ ಪ್ರತಿವಾದಿಯರು ಒಂದು ರೂಪಾಯಿ ಬಡ್ಡಿಯನ್ನು ಸಹ ಕೊಟ್ಟಿಲ್ಲ ಎಂದು ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸ ನಿಜವಾದರೆ ನಾನು ರೂ.43,20,000/- ಹಣ ಕೊಡಬೇಕಾಗುತ್ತದೆ ಎಂದರೆ ಸರಿ. ಸದರಿ ನೋಟೀಸಗೆ ನಾನು ಮರು ಉತ್ತರ ನೀಡಿಲ್ಲ. ಮರು ಉತ್ತರ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನು ಸದರಿ ನೋಟೀಸನ್ನು 20.03.2026 ರಂದು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನೋಟೀಸ್ ಗೆ ಉತ್ತರ ನೀಡಲು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. 2014 ರಲ್ಲಿ ದಾವಾ ಜಮೀನಿಗೆ ಎಕರಿಗೆ 2 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ 8 ರಲ್ಲಿ ಬರೆದ ಅಂಶಗಳು ಸತ್ಯವಾಗಿರುತ್ತವೆ. ನಿಡಿ-1 ರಲ್ಲಿ ಜಮೀನನ್ನು ಗೃಹ ಕೃತ್ಯದ ಖರ್ಚಿಗಾಗಿ ಹಾಗೂ ಹಿಂದೆ ಮಾಡಿದ ಸಾಲವನ್ನು ತೀರಿಸಲು ಭೋಗ್ಯ ಮಾಡಿರುತ್ತೇನೆ ಎಂದು ಬರೆಯಲಾಗಿದೆ ಎಂದರೆ ಸರಿ. ನಾನು ಬಡ್ಡಿ ರಾಜಣ್ಣರವರಿಂದ 5 ಲಕ್ಷ ಸಾಲ ಪಡೆದುಕೊಂಡಿದ್ದೇನು. ನಾನು ಅಸಲು ಹಾಗೂ ಬಡ್ಡಿ ತೀರಿಸದೇ ಇರುವುದರಿಂದ 5 ಲಕ್ಷ ಸಾಲ 15 ಲಕ್ಷ ಆಗಿರುತ್ತದೆ. 8 ನೇ ಪ್ರತಿವಾದಿಯ ಗಂಡ ಬಡ್ಡಿ ರಾಜಣ್ಣರವರು ನನಗೆ ಯಾವುದೇ ನಗದು ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿಯ ಗಂಡನಿಂದ ಯಾವಾಗ 5 ಲಕ್ಷ ಸಾಲ ಪಡೆದುಕೊಂಡಿರುತ್ತೇನೆ ನನಗೆ ನೆನಪಿಲ್ಲ ಮನೆಯಲ್ಲಿ ದಾಖಲೆ ಇದೆ ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಸರ್ವೆ ನಂಬರ 46/1 ಹಾಗೂ 46/3 ಕ್ಕೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಗೆ ಮಾತ್ರ ಹಕ್ಕು ಇರುತ್ತದೆ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದು ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ ಆದರೆ ಎಲ್ಲಾರಿಗೂ ಸಮನಾದ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ-1 ರ ಪತ್ರವನ್ನು ನಾನು, 3 ಮತ್ತು 4 ನೇ ಪ್ರತಿವಾದಿಯರು ಸೇರಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ಸ್ವತ್ತುಗಳು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತಾಗಿದ್ದರೆ ನಾನು, 3 ಮತ್ತು 4 ನೇ ಪ್ರತಿವಾದಿಗಳು ಸೇರಿ ಪತ್ರ ಬರೆದುಕೊಡುವ ಪ್ರಶ್ನೆಯೇ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-1 ಕ್ಕೆ ವಾದಿ ಸಹಿ ಮಾಡಿಲ್ಲ ಎಂದರೆ

ಸರಿ. ವಾದಿ ಯಾವುದೇ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿ ನಾನು ಮಾತ್ರ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿ ಗಂಡನಿಂದ ಪಡೆದ ಸಾಲವನ್ನು ಮರುಪಾವತಿ ಮಾಡಲು ನಾನು, 3 ಮತ್ತು 4 ನೇ ಪ್ರತಿವಾದಿಗಳು ಮಾತ್ರ ಬಾದ್ಯಸ್ಥರು ಎಂದರೆ ಸರಿಯಲ್ಲ ವಾದಿಯೂ ಸಹ ಬಾದ್ಯಸ್ಥರು ಎಂದು ನುಡಿಯುತ್ತಾರೆ. ಸಾಕ್ಷಿ ವಾದಿಯ ಮದುವೆಗೆ ಸಾಲ ಪಡೆದಿದ್ದರಿಂದ ಆತನು ಸಹ ಸಾಲ ಮರುಪಾವತಿ ಮಾಡಬೇಕು ಎಂದು ನುಡಿಯುತ್ತಾರೆ. ವಾದಿಗೆ 20-22 ವಯಸ್ಸಿನಲ್ಲಿ ವದುವೆಯಾಗಿರುತ್ತದೆ. ಅಕ್ಕ ತಂಗಿಯರ ಮದುವೆಯ ನಂತರ ವಾದಿ ಮದುವೆ ಮಾಡಿಕೊಂಡಿರುತ್ತಾರೆ.

ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ತಾಯಿ ತೀರಿಕೊಂಡಿದ್ದರಿಂದ ಸಾಲದ ಹಣಕ್ಕೆ ಬಡಿಯನ್ನು ನಾನು ಪಾವತಿಸಬೇಕು ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಸಾಲ ಪಡೆದುಕೊಂಡಿದ್ದರಿಂದ ಬಡ್ಡಿ ನಾನೇ ಕಟ್ಟಬೇಕು ಎಂದರೆ ಸರಿ. ನಾನು ಎಲ್ಲಿಯವರೆಗೆ ಬಡ್ಡಿ ಕಟ್ಟಿರುತ್ತೇನೆ ನೆನಪಿಲ್ಲ ಬಡ್ಡಿ ಕಟ್ಟಿದ ಬಗ್ಗೆ ದಾಖಲೆಗಳು ಇಲ್ಲ. ನನ್ನ ತಾಯಿ ತೀರುವವರೆಗೂ ಸಹ ನಾನು 8 ನೇ ಪ್ರತಿವಾದಿಯರಿಗೆ ಬಡ್ಡಿ ನೀಡಿರುತ್ತೇನೆ. ನಾನು 6 ಲಕ್ಷ ಹಾಗೂ ವಾದಿ 3 ಲಕ್ಷ 8 ನೇ ಪ್ರತಿವಾದಿಗೆ ಕೊಡಬೇಕು ಎಂದು ಊರಿನಲ್ಲಿ ನ್ಯಾಯಾ ಪಂಚಾಯಿತಿ ಆಗಿತ್ತು. ಸದರಿ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ. ನಿಡಿ-2 ರಲ್ಲಿ ಹೇಳಿದ ವಿಚಾರ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ನಿಜವಾಗಿರುತ್ತವೆ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ನಾನು, 2 ಹಾಗೂ 3 ನೇ ಪ್ರತಿವಾದಿ ಆಧಾರ ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-1 ರ ಪ್ರಕಾರ ವಾದಿ 8 ನೇ ಪ್ರತಿವಾದಿಗೆ ಹಣ ನೀಡಲು ಬಾದ್ಯಸ್ಥನಲ್ಲ ನಾನು ಸಾಲ ಪಡೆದಿದ್ದರಿಂದ ನಾನೇ ಸಾಲ ತೀರಿಸಬೇಕು ಎಂದರೆ ಸರಿಯಲ್ಲ ಸಾಕ್ಷಿ ನ್ಯಾಯಾಲಯ ತೀರ್ಮಾನಿಸಿದರೇ ನಾನೇ ಕಟ್ಟುತ್ತೇನೆ ಎಂದು ನುಡಿಯುತ್ತಾರೆ. ವಾದಿಗೆ ದಾವಾ ಸ್ವತ್ತಿನಲ್ಲಿ ಭಾಗ ನೀಡಬಾರದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ-2 ರಲ್ಲಿ ಬೊರವೇಲ್ ಇದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಮೊದಲು

ಮಾವು ಹಾಗೂ ತೆಂಗಿನ ತೋಟ ಇತ್ತು ಎಂದರೆ ಸರಿ. ಸದರಿ ಜಮೀನಿನಲ್ಲಿ ಕಬ್ಬು, ತರಕಾರಿಗಳು ಬೆಳೆಯುತ್ತಿದ್ದೇನು ಎಂದರೆ ಸರಿ.

ಜಮೀನಿನಿಂದ ಬಂದ ಆದಾಯವನ್ನು ನಾನು ಒಬ್ಬನೇ ಉಪಯೋಗಿಸುತ್ತಿದ್ದೇನೆ ಎಂದರೆ ಯಾವುದೇ ಆದಾಯ ಬರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ನಾನು ಫಸಲು ನಷ್ಟ ಭರ್ತಿ ಮಾಡಲು ನಾನು ಬಾದ್ಯಸ್ಥ ಎಂದರೆ ಸಾಕ್ಷಿ ವಾದಿಯೇ ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**